ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY
(Accredited by NAAC with 'A' Grade)

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574 199
Office of the Registrar
Mangalagangothri – 574 199

ಕ್ರಮಾಂಕ/ No. : ಮಂವಿ/ಶೈಕ್ಷಣಿಕ/ಯುಜಿ-ಕ್ಯಾಲ್/ಸಿಆರ್.1/2017-18/ಎ6

ದಿನಾಂಕ/Date: 29.07.2017

**ಸುತ್ತೋಲೆ**

ವಿಷಯ: ಪಿಯುಸಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗಳ ಪ್ರವೇಶಾತಿಗೆ ಅನುಮತಿ ನೀಡುವ ಬಗ್ಗೆ

ಉಲ್ಲೇಖ: 1) ಈ ಕಚೇರಿ ಅಧಿಸೂಚನೆ ಸಮ ಸಂಖ್ಯೆ ದಿನಾಂಕ 12.06.2017
2) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 28.07.2017

~~~~~~

ಪಿಯುಸಿ ಪೂರಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸುವ ಉದ್ದೇಶದಿಂದ ಶೈಕ್ಷಣಿಕ ವರ್ಷ 2017-18ನೇ ಸಾಲಿನಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ/ ಘಟಕ ಕಾಲೇಜುಗಳಲ್ಲಿ ನಡೆಸಲ್ಪಡುವ ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಬಿ.ಎಸ್.ಡಬ್ಲ್ಯು./ ಬಿ.ಬಿ.ಎ./ ಬಿ.ಸಿ.ಎ./ ಬಿ.ಎ.(ಹೆಚ್.ಆರ್.ಡಿ.)/ ಬಿ.ಎ.(ಸೆಕ್ಯೂರಿಟಿ ಆಂಡ್ ಡಿಟೆಕ್ಟಿವ್ ಸೈನ್ಸ್)/ ಬಿ.ಹೆಚ್.ಎಂ./ ಬಿ.ಎಸ್ಸಿ.(ಹೆಚ್.ಎಸ್.)/ ಬಿ.ಎಸ್ಸಿ.(ಆನಿಮೇಶನ್ & ವಿಜ್ಯುವಲ್ ಇಫೆಕ್ಟ್ಸ್), ಬಿ.ಎ.ಎಸ್.ಎಲ್.ಪಿ./ ಬಿ.ಎಸ್ಸಿ.(ಐಡಿ&ಡಿ, ಎಫ್‌ಡಿ, ಜಿಡಿ)/ ಬಿ.ಎಸ್ಸಿ.(ಎಫ್.ಎನ್.ಡಿ.)/ ಬಿ.ವಿ.ಎ. ಕೋರ್ಸುಗಳಿಗೆ ಈ ಕೆಳಗಿನ ಷರತ್ತುಗಳಿಗೊಳಪಟ್ಟು **ದಿನಾಂಕ: 5.08.2017ರವರೆಗೆ** ವಿಶೇಷ ನೆಲೆಯಲ್ಲಿ ಪ್ರವೇಶಾತಿ ನೀಡಲು ಅನುಮತಿ ನೀಡಲಾಗಿದೆ. ಈ ಸುತ್ತೋಲೆಯ ಮೇರೆಗೆ ಪ್ರವೇಶಾತಿ ನೀಡಿದ ವಿದ್ಯಾರ್ಥಿಗಳ **ಪ್ರವೇಶಾತಿ ತಃಖ್ತೆಯನ್ನು ಪ್ರತ್ಯೇಕವಾಗಿ ದಿನಾಂಕ 10.08.2017ರ ಒಳಗಾಗಿ ಸಲ್ಲಿಸತಕ್ಕದ್ದು.**

1. ವಿಶ್ವವಿದ್ಯಾನಿಲಯ ಮಂಜೂರು ಮಾಡಿರುವ ವಿದ್ಯಾರ್ಥಿ ಪರಿಮಿತಿಯಲ್ಲಿ ಖಾಲಿ ಸೀಟುಗಳು ಲಭ್ಯವಿದ್ದಲ್ಲಿ ಮೀಸಲಾತಿ ನಿಯಮಗಳನ್ನು ಗಮನದಲ್ಲಿರಿಸಿ ಅರ್ಹ ವಿದ್ಯಾರ್ಥಿಗಳ ಪ್ರವೇಶಾತಿ ಮಾಡ ತಕ್ಕದ್ದು. **ಈ ಬಗ್ಗೆ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಯನ್ನು ಮಂಜೂರು ಮಾಡಲಾಗುವುದಿಲ್ಲ.**

2. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಕೋರ್ಸುಗಳ ವಿನಿಯಮದ ಪ್ರಕಾರ ಪರೀಕ್ಷೆಗೆ ಹಾಜರಾಗಲು ಬೇಕಾಗುವ ಹಾಗೂ ಇನ್ನಿತರ ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಕನಿಷ್ಟ ಹಾಜರಾತಿಯನ್ನು ಪೂರೈಸುವ ಷರತ್ತಿಗೊಳಪಟ್ಟು, **ಕಾಲೇಜಿನ ನಿಯಮಿತ ತರಗತಿಗಳ ಹೊರತಾಗಿ ಶನಿವಾರ, ಭಾನುವಾರ ಮತ್ತು ಇತರ ರಜಾ ದಿನಗಳು ಸೇರಿದಂತೆ ಹೆಚ್ಚುವರಿ ತರಗತಿಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆಯಾಗದಂತೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ನಿಗಾ ವಹಿಸತಕ್ಕದ್ದು.**

3. ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ನಡೆಸಲ್ಪಡುವ ಹೆಚ್ಚುವರಿ ವಿಶೇಷ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಲು ಸಿದ್ಧರಾಗಿರತಕ್ಕದ್ದು.

4. ವಿದ್ಯಾರ್ಥಿಗಳ ಹಾಜರಾತಿಯು ಶೇಕಡ 75 (75%) ಕಡ್ಡಾಯವಾಗಿ ಇರತಕ್ಕದ್ದು.

5. ಪ್ರವೇಶಾತಿಗೆ ಸಂಬಂಧಿಸಿದಂತೆ ಪ್ರತಿ ವಿದ್ಯಾರ್ಥಿಯಿಂದ ರೂ.100/- ದಂಡ ಶುಲ್ಕವನ್ನು ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಪಾವತಿಸತಕ್ಕದ್ದು.

6. ವಿದ್ಯಾರ್ಥಿಗಳ ಪ್ರವೇಶಾತಿಗೆ ನಿಗದಿ ಪಡಿಸಿರುವ **ಕೊನೆಯ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.**

ಮೇಲಿನ ಷರತ್ತುಗಳಲ್ಲಿ (1) ಮತ್ತು (2)ನ್ನು ಸಂಬಂಧಿಸಿದ ಕಾಲೇಜುಗಳು ಹಾಗೂ (3), (4) ಮತ್ತು (5)ನ್ನು ಸಂಬಂಧಿಸಿದ ವಿದ್ಯಾರ್ಥಿಗಳು ಪೂರೈಸಲು ಬದ್ಧರಾಗಿದ್ದಲ್ಲಿ ಮಾತ್ರ ಮೇಲೆ ತಿಳಿಸಿದ ಅನುಮತಿಯು ಅನ್ವಯಿಸುತ್ತದೆ.

ಕುಲಸಚಿವರು.

ರಿಗೆ:

1) ಪ್ರಾಂಶುಪಾಲರು, ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ/ ಘಟಕ ಕಾಲೇಜುಗಳು.
2) ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ.
3) ವಿಶೇಷಾಧಿಕಾರಿ, ಪರಿಶಿಷ್ಟ ಜಾತಿ: ಪಂಗಡ ಘಟಕ, ಮಂಗಳೂರು ವಿಶ್ವವಿದ್ಯಾನಿಲಯ.
4) ನಿರ್ದೇಶಕರು, DUIMS, ಮಂಗಳೂರು ವಿಶ್ವವಿದ್ಯಾನಿಲಯ – ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವರೇ ಕ್ರಮ ಕೈಗೊಳ್ಳುವುದು.
5) ಕುಲಪತಿಯವರ ಆಪ್ತ ಕಾರ್ಯದರ್ಶಿ/ ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.
6) ಎ4/ ಎ5/ ಎ7/ ಎ8/ ಎ9/ ಎ10 ಕಾರ್ಯ ನಿರ್ವಾಹಕರು, ಶೈಕ್ಷಣಿಕ ವಿಭಾಗ, ಕುಲಸಚಿವರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ.
~~~~~~